
**SUNDAY 27.10.2024**

# ನ.14-17ರವರೆಗೆ ಕೃಷಿ ಮೇಳ

## 1 ಎಕ್ರೆಯಲ್ಲಿ ಡಿಜಿಟಲ್ ಕೃಷಿ ಅನಾವರಣ | 700 ಮಳಿಗೆಗೆ ಅವಕಾಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ನ.14ರಿಂದ 17ರವರೆಗೆ 'ಹವಾಮಾನ ಚತುರ ಡಿಜಿಟಲ್ ಕೃಷಿ' ಘೋಷ ವಾಕ್ಯದಡಿ ಹೆಬ್ಬಾಳದ ಜಿಕೆವಿಕೆಯಲ್ಲಿ ಕೃಷಿ ಮೇಳ ಆಯೋಜಿಸಲಾಗಿದ್ದು, 1 ಎಕರೆಯಲ್ಲಿ ಡಿಜಿಟಲ್ ಕೃಷಿ ಅನಾವರಣ ಗೊಳ್ಳಲಿದೆ. ನಾಲ್ಕು ಹೊಸ ತಳಿ ಸೇರಿ ಹಲವು ಹೊಸ ತಾಂತ್ರಿಕತೆ ಗಳು ಪ್ರದರ್ಶನದಲ್ಲಿ ರಲಿವೆ.



ಡಾ। ಎಸ್.ವಿ.ಸುರೇಶ

ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವಿವಿ ಕುಲಪತಿ ಡಾ। ಎಸ್.ವಿ.ಸುರೇಶ, ಈ ಬಾರಿ ತಂತ್ರ ಜ್ಞಾನಕ್ಕೆ ಒತ್ತು ನೀಡಲಾಗಿದ್ದು, ಸೆನ್ಸಾರ್‌ಆಧಾರಿತ ಡ್ರೋನ್, ಔಷಧ ಸಿಂಪಡಿ ಸುವ ಸೆನ್ಸಾರ್‌ಆಧಾರಿತ ಯಂತ್ರಗಳು ಪ್ರದರ್ಶನಗೊಳ್ಳಲಿವೆ. ಕಳೆದ ವರ್ಷ ಕೃಷಿ ಮೇಳಕ್ಕೆ ಸುಮಾರು 17 ಲಕ್ಷ ಜನ ಭೇಟಿ ನೀಡಿದ್ದು, ಈ ಬಾರಿ ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನ ಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ ಎಂದರು.

1 ಎಕರೆಯಲ್ಲಿ ಡಿಜಿಟಲ್ ಕೃಷಿ ಅನಾವರಣ ಗೊಳ್ಳಲಿದೆ. ಜೊತೆಗೆ ಸುಧಾರಿತ ಯಂತ್ರಗಳ ಪ್ರದರ್ಶನ ಕ್ಕಾಗಿ ಒಂದು ಎಕರೆ ಭೂಮಿ ಯಲ್ಲಿ ಪ್ರತ್ಯೇಕ ಪೆವಿಲಿಯನ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

**700 ಮಳಿಗೆ:** ಕೃಷಿ ಮೇಳದಲ್ಲಿ 700 ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಅಲಂಕಾರಿಕ ಮೀನು ಗಳು ವಿಶೇಷವಾಗಿರಲಿವೆ ಎಂದರು.

### ಮೇಳದಲ್ಲಿ 4 ಹೊಸ ತಳಿ ಬಿಡುಗಡೆ

ಮುಸುಕಿನ ಜೋಳ ಸಂಕರಣ ತಳಿ, ಅಲಸಂದೆ ತಳಿ, ಸೂರ್ಯಕಾಂತಿ ಸಂಕರಣ ತಳಿ, ಬಾಜ್ರ ನೇಪಿಯರ್ ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ಕೊಡುವ ಇವನ್ನು ಕೃಷಿ ಮೇಳದಲ್ಲಿ ಬಿಡುಗಡೆ ಮಾಡಲಾಗುವುದು.

### ಮರಗಳ ಹನನ: ಪ್ರತಿಕ್ರಿಯೆಗೆ ನಕಾರ

'ಕನ್ನಡಪ್ರಭ' ಶನಿವಾರ ಪ್ರಕಟಿಸಿದ 'ಕೃಷಿ ಮೇಳಕ್ಕಾಗಿ ಜಿಕೆವಿಕೆಯಲ್ಲಿ ಮರಗಳಿಗೆ ಕೊಡಲಿ: ಆಕ್ರೋಶ' ವರದಿಗೆ ಸಂಬಂಧಿಸಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಲು ವಿವಿ ಕುಲಪತಿ ಡಾ। ಎಸ್.ವಿ.ಸುರೇಶ ನಿರಾಕರಿಸಿದರು. ಕೃಷಿಮೇಳದ ಸಾರ್ವಜನಿಕ ಸಮಾರಂಭ ನಡೆಯುವ ವೇದಿಕೆಯ ಸಮೀಪದಲ್ಲಿ 15-20 ವರ್ಷಗಳಿಂದ ಇದ್ದ ಹುಣಸೆ ಸೇರಿ ಮತ್ತಿತರ ಜಾತಿಯ ಐದು ಮರಗಳನ್ನು ಕಡಿದ ಸಂಬಂಧ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಆದರೆ, 'ಅದು ಹಾಗಾಗಿಲ್ಲ, ಈ ಬಗ್ಗೆ ಸ್ಪಷ್ಟನೆ ನೀಡುತ್ತೇವೆ' ಎಂದಷ್ಟೇ ಹೇಳಿ ಸುಮ್ಮನಾದರು.

**ರೈತರಿಗೆ ಸನ್ಮಾನ:** ಕೃಷಿಯಲ್ಲಿ ಸಾಧನೆ ಮಾಡಿದ ರೈತರನ್ನು ಇದೇ ವೇಳೆ ಗೌರವಿಸಲಾಗುವುದು. ಇದಕ್ಕಾಗಿ ರಾಜ್ಯಮಟ್ಟದಲ್ಲಿ 6 ಮಂದಿ, ಜಿಲ್ಲಾ ಮಟ್ಟದಲ್ಲಿ 20 ಹಾಗೂ ತಾಲೂಕು ಮಟ್ಟದಲ್ಲಿ 120 ಮಂದಿ ರೈತರಿಗೆ ಪ್ರಶಸ್ತಿ ನೀಡಲಾಗುವುದು ಎಂದು ಅವರು ಹೇಳಿದರು.

KannadaPrabha
Pg.05

---

ನ.14ರಿಂದ 17ರವರೆಗೆ ಆಯೋಜನೆ | ತೆಂಗಿನಕಾಯಿ ಕೀಳುವ ಸೆನ್ಸರ್ ಆಧರಿತ ಡ್ರೋನ್ ಆಕರ್ಷಣೆ

# ಕೃಷಿ ಮೇಳದಲ್ಲಿ ಡಿಜಿಟಲ್ ಕೃಷಿ ಮಾಹಿತಿ

■ **ವಿಕ ಸುದ್ದಿಲೋಕ** ಬೆಂಗಳೂರು

ತೆಂಗಿನ ಮರದ ತುದಿಯವರೆಗೂ ಸಾಗಿ ಕಾಯಿ ಕೀಳುವ ಸೆನ್ಸರ್ ಆಧರಿತ ಡ್ರೋನ್, ಬೆಳೆಗಳಿಗೆ ಔಷಧ ಸಿಂಪಡಿಸುವ ಸೆನ್ಸರ್ ಆಧರಿತ ಯಂತ್ರಗಳು... ಹೀಗೆ ಹೊಸ ಹೊಸ ತಂತ್ರಜ್ಞಾನಗಳು ಈ ಬಾರಿ ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯಲಿವೆ.

''ಜಿಕೆವಿಕೆ ಆವರಣದಲ್ಲಿ ಹವಾಮಾನ ಚತುರ ಡಿಜಿಟಲ್ ಕೃಷಿ ಎಂಬ ಘೋಷವಾಕ್ಯದೊಂದಿಗೆ ನ.14 ರಿಂದ 17ರವರೆಗೆ ಈ ಬಾರಿ ಕೃಷಿ ಮೇಳ ಆಯೋಜಿಸಲಾಗುತ್ತಿದೆ. ಈ ಬಾರಿ ರೈತರೇ ಕೃಷಿ ಮೇಳದ ರಾಯಭಾರಿಗಳು. ಮೇಳಕ್ಕೆ ಭೇಟಿ ನೀಡಲಾಗದವರು ಆನ್‌ಲೈನ್ ಮೂಲಕವೂ ವೀಕ್ಷಿಸಬಹುದು,'' ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

''ಈ ವರ್ಷ ಸ್ಥಳೀಯ ಜಾನುವಾರುಗಳ ಪ್ರದರ್ಶನಕ್ಕೆ ಒತ್ತು ನೀಡಲಾಗುವುದು. ಕಳೆದ ವರ್ಷ ಸುಮಾರು 17 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿದ್ದರು. ಈ ಬಾರಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ,'' ಎಂದು ಹೇಳಿದರು.

''ಕೃಷಿಕರನ್ನು ಬಾಧಿಸುತ್ತಿರುವ ಕೂಲಿ ಕಾರ್ಮಿಕರ ಕೊರತೆ ನೀಗಿಸುವುದು, ಖರ್ಚು ಕಡಿಮೆ ಮಾಡಲು ಡಿಜಿಟಲ್ ಕೃಷಿ ಪೂರಕವಾಗಲಿದೆ,'' ಎಂದರು.

ಗೋಷ್ಠಿಯಲ್ಲಿ ಬೆಂಗಳೂರು ಕೃಷಿ ವಿವಿ ಕುಲಸಚಿವ ಡಾ. ಕೆ.ಸಿ.ನಾರಾಯಣಸ್ವಾಮಿ, ಸಂಶೋಧನಾ ನಿರ್ದೇಶಕ ಡಾ. ಎಚ್.ಎಸ್. ಶಿವರಾಮು, ವಿಸ್ತರಣಾ ನಿರ್ದೇಶಕ ಡಾ. ವಿ. ಎಲ್.ಮಧುಪ್ರಸಾದ್, ಡಾ. ಮೋಹನ್ ಈಶ್ವರ್ ನಾಯ್ಕ, ತರಬೇತಿ ಸಂಯೋಜಕ ಡಾ. ಕೆ.ಶಿವರಾಮು ಉಪಸ್ಥಿತರಿದ್ದರು.

**ಹೊಸ ತಳಿಗಳ ಬಿಡುಗಡೆ:** ''ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ಕೊಡುವ ಮುಸುಕಿನ ಜೋಳ ಸಂಕರಣ ತಳಿ, ಅಲಸಂದೆ, ಸೂರ್ಯಕಾಂತಿ, ಬಾಜ್ರ ನೇಪಿಯರ್ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೃಷಿ ಮೇಳದಲ್ಲಿ ಇವುಗಳನ್ನು ಪರಿಚಯಿಸಲಾಗುವುದು,'' ಎಂದು ಕೃಷಿ ವಿವಿ ಕುಲಪತಿ ಸುರೇಶ್ ಹೇಳಿದರು.

**ರಿಯಾಯಿತಿ ದರದಲ್ಲಿ ಮುದ್ದೆ ಊಟ:** ಮೇಳಕ್ಕೆ ಬರುವ ರೈತರು ಹಾಗೂ ಸಾರ್ವಜನಿಕರಿಗೆ ಮೇಳದಲ್ಲಿ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಮಾಡಲಾಗುವುದು. ಇದಲ್ಲದೆ ಇತರೆ ತಿಂಡಿ ಮಾರಾಟ ಮಳಿಗೆಗಳಿರುತ್ತವೆ.




ಕೃಷಿ ಮೇಳದ ಕುರಿತು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

### 700 ಮಳಿಗೆಗಳಿಗೆ ವ್ಯವಸ್ಥೆ

ಸುಧಾರಿತ ಯಂತ್ರಗಳ ಪ್ರದರ್ಶನಕ್ಕಾಗಿ ಒಂದು ಎಕರೆಯಲ್ಲಿ ಪ್ರತ್ಯೇಕ ಪೆವಿಲಿಯನ್ ವ್ಯವಸ್ಥೆ ಮಾಡಲಾಗುತ್ತಿದೆ. ಕೃಷಿ ಮೇಳದಲ್ಲಿ 700 ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಅಲಂಕಾರಿಕ ಮೀನುಗಳೂ ಗಮನಸೆಳೆಯಲಿವೆ.

### 146 ಮಂದಿಗೆ ಸನ್ಮಾನ

''ಕೃಷಿಯಲ್ಲಿ ಸಾಧನೆ ಮಾಡಿದ ರೈತರನ್ನು ಇದೇ ವೇಳೆ ಗೌರವಿಸಲಾಗುವುದು. ಇದಕ್ಕಾಗಿ ರಾಜ್ಯಮಟ್ಟದಲ್ಲಿ 6 ಮಂದಿ, ಜಿಲ್ಲಾ ಮಟ್ಟದಲ್ಲಿ 20 ಹಾಗೂ ತಾಲೂಕು ಮಟ್ಟದಲ್ಲಿ 120 ಮಂದಿ ರೈತರಿಗೆ ಪ್ರಶಸ್ತಿಗಳನ್ನು ನೀಡಲಾಗುವುದು,'' ಕೃಷಿ ವಿವಿ ಕುಲಪತಿ ಸುರೇಶ ತಿಳಿಸಿದರು.

### ಪ್ರವೇಶ ಉಚಿತ

ಮೇಳಕ್ಕೆ ಬರುವವರಿಗೆ ಪ್ರವೇಶ ಉಚಿತವಾಗಿರುತ್ತದೆ. ರಾಜ್ಯದ ನಾನಾ ಭಾಗಗಳಿಂದ ಬಸ್‌ನಲ್ಲಿ ಬರುವವರಿಗೆ ಜಿಕೆವಿಕೆ ಪ್ರವೇಶ ದ್ವಾರದಿಂದ ಮೇಳದ ಸ್ಥಳಕ್ಕೆ ಕರೆದೊಯ್ಯಲು ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಕಾರು, ಬೈಕ್ ಹಾಗೂ ಇತರೆ ವಾಹನಗಳಲ್ಲಿ ಬರುವವರಿಗೆ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲಾಗುತ್ತಿದೆ.

### ವಿಶೇಷಚೇತನರಿಗಾಗಿ ಅ.27ರಂದು ಕೃಷಿ ಮೇಳ

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನವೆಂಬರ್‌ನಲ್ಲಿ ಹಮ್ಮಿಕೊಂಡಿರುವ ಕೃಷಿ ಮೇಳಕ್ಕೆ ಲಕ್ಷಾಂತರ ಮಂದಿ ಆಗಮಿಸಲಿದ್ದು, ಈ ವೇಳೆ ವಿಶೇಷಚೇತನರು ಭೇಟಿ ನೀಡುವುದು ಕಷ್ಟ. ಹೀಗಾಗಿಯೇ, ಹೀಗಾಗಿ ಅ.27ರಂದು ವಿಶೇಷಚೇತನರಿಗಾಗಿ ಕೃಷಿ ಮೇಳ ಆಯೋಜಿಸಲಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಅ.27ರಂದು ವಿಶೇಷ ಚೇತನರಿಗಾಗಿಯೇ ಪರಿಸರ ವೀಕ್ಷಣೆಗೆ ವ್ಯವಸ್ಥೆ ಮಾಡಿದೆ. 'ವಿಶೇಷ ಚೇತನರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ನಾನಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಇದರಲ್ಲಿ 8 ರಿಂದ 18 ವರ್ಷದೊಳಗಿನ ವಿಶೇಷಚೇತನರು ಭಾಗವಹಿಸಬಹುದು. ಇವರಿಗೆ ತಾಕುಗಳನ್ನು ತೋರಿಸಲಾಗುತ್ತದೆ. ಸಾಮಾಜಿಕ ಕಳಕಳಿಯ ಈ ಕಾರ್ಯಕ್ರಮವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ವಿವಿ ಕುಲಪತಿ ಡಾ. ಎಸ್. ವಿ. ಸುರೇಶ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ವಿಶೇಷಚೇತನ ಶಾಲೆಗಳು ಹಾಗೂ ಸಂಘ ಸಂಸ್ಥೆಗಳು 8-18 ವರ್ಷದೊಳಗಿನ ಮಕ್ಕಳನ್ನು ಕರೆ ತರಲಿವೆ. ವೈವಿಧ್ಯಮಯ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಂಗ್ರಹಾಲಯ, ಸಸ್ಯ ಉದ್ಯಾನ, ಮಧುವನ, ಸಮಗ್ರ ಕೃಷಿ ಕ್ಷೇತ್ರಕ್ಕೆ ಭೇಟಿ ನೀಡುವ ಅವಕಾಶ ಕಲ್ಪಿಸಿ, ಅಗತ್ಯ ಮಾಹಿತಿಯನ್ನು ತಜ್ಞರು ನೀಡಲಿದ್ದಾರೆ. ಮಾಹಿತಿಗೆ ದೂರವಾಣಿ: 080-23625411.

Vijaya Karnataka
Pg.09


Vijayavani Pg.5a

# ನ.14ರಿಂದ 17ರವರೆಗೆ ಜಿಕೆವಿಕೆಯಲ್ಲಿ ಕೃಷಿಮೇಳ

## ಹವಾಮಾನ ಚತುರ ಡಿಜಿಟಲ್ ಕೃಷಿಗೆ ಒತ್ತು

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿ ನ. 14ರಿಂದ 17ರವರೆಗೆ 2024ನೇ ಸಾಲಿನ ಕೃಷಿಮೇಳವನ್ನು ಆಯೋಜಿಸಲಾಗಿದೆ.

ಈ ಬಾರಿ ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ರೈತರು ಹೊಸ ತಂತ್ರಜ್ಞಾನ ಹಾಗೂ ತಾಂತ್ರಿಕತೆ ಮೂಲಕ ಬೆಳೆಗಳನ್ನು ರಕ್ಷಿಸಿಕೊಂಡು ಹೆಚ್ಚು ಆದಾಯ ಕಂಡುಕೊಳ್ಳಲು ಉತ್ಸುಕರಾಗಿದ್ದಾರೆ. ಇದಕ್ಕಾಗಿ ಮೇಳದಲ್ಲಿ ರೈತರನ್ನು ಕೇಂದ್ರೀಕರಿಸಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ಹವಾಮಾನ ವೈಪರೀತ್ಯದಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೆ ನಿಖರ ಪರಿಹಾರ ಒದಗಿಸುವ ನಿಟ್ಟಿನಲ್ಲಿ 'ಹವಾಮಾನ ಚತುರ ಡಿಜಿಟಲ್ ಕೃಷಿ'ಗೆ ಒತ್ತು ನೀಡಲಾಗುವುದು. ಈ ಹಿನ್ನೆಲೆಯಲ್ಲಿ ರೈತರನ್ನೇ ಮೇಳದ ರಾಯಭಾರಿಗಳನ್ನಾಗಿ ಮಾಡಿಕೊಳ್ಳಲಾಗುವುದು ಎಂದು ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



» ಕುಲಪತಿ ಡಾ. ಎಸ್.ವಿ. ಸುರೇಶ್ ಮಾಹಿತಿ

ಪ್ರಸ್ತುತ ಸನ್ನಿವೇಶದಲ್ಲಿ ರೈತರು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡಲ್ಲಿ ಮಾತ್ರ ಹೆಚ್ಚಿನ ಆದಾಯ ಪಡೆಯಬಹುದು. ಇದಕ್ಕಾಗಿ ವ್ಯವಸಾಯದ ಜತೆಗೆ ಉಪಕಸುಬನ್ನು ಬಳಸಿಕೊಳ್ಳಬೇಕಿದೆ. ಹೈನುಗಾರಿಕೆ ಹೊರತುಪಡಿಸಿ ಪಶುಸಂಗೋಪನೆ, ಕುಕ್ಕುಟೋದ್ಯಮ, ಮೀನು ಸಾಕಣೆ, ಜೇನು ಸಾಕಣೆ, ಗೊಬ್ಬರ ತಯಾರಿಕೆ ಇತ್ಯಾದಿ ಚಟುವಟಿಕೆಯನ್ನು ಹೊಸ ವಿಧಾನದಲ್ಲಿ ಕೈಗೊಳ್ಳುವಂತಹ ಮಾದರಿಯನ್ನು ಪ್ರದರ್ಶನದಲ್ಲಿ ತಿಳಿಸಿಕೊಡಲಾಗುತ್ತದೆ. ಇದು ನಗರವಾಸಿಗಳಿಗೆ ಅನುಕೂಲವಾಗುವ ಕಾರಣ ಹೆಚ್ಚಿನ ಮಳಿಗೆಗಳನ್ನು ಮೀಸಲಿಡಲಾಗಿದೆ ಎಂದು ಅವರು ತಿಳಿಸಿದರು.

### 700 ಮಳಿಗೆ, ಹೊಸ ತಳಿಗಳು

ಕೃಷಿ ಮೇಳ-2024ರಲ್ಲಿ ಅಂದಾಜು 700 ಮಳಿಗೆಗಳನ್ನು ತೆರೆಯಲಾಗುವುದು. ಇದರಲ್ಲಿ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಪ್ರದರ್ಶನಗಳೂ ಇರಲಿವೆ. ಗ್ರಾಮೀಣ ಕುಶಲಕರ್ಮಿಗಳು, ಸ್ವಸಹಾಯ ಗುಂಪುಗಳು, ನವೋದ್ಯಮಿಗಳಿಗೆ ಆದ್ಯತೆ ನೀಡಲಾಗುತ್ತದೆ. ಕಡಿಮೆ ಅವಧಿಯಲ್ಲಿ ಹೆಚ್ಚು ಇಳುವರಿ ನೀಡುವ ಮುಸುಕಿನ ಜೋಳ ಸಂಕರಣ ತಳಿ, ಸೂರ್ಯಕಾಂತಿ, ಬಾಜ್ರ ನೇಪಿಯರ್, ಅಲಸಂದೆ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಇವುಗಳನ್ನು ಮೇಳದಲ್ಲಿ ಮುಖ್ಯಮಂತ್ರಿಗಳು ಬಿಡುಗಡೆ ಮಾಡಲಿದ್ದಾರೆ ಎಂದು ಡಾ. ಎಸ್.ವಿ. ಸುರೇಶ್ ತಿಳಿಸಿದರು.

**ಜಾನುವಾರುಗಳ ಪ್ರದರ್ಶನ:** ಈ ವರ್ಷ ಸ್ಥಳೀಯ ಜಾನುವಾರುಗಳ ಪ್ರದರ್ಶನಕ್ಕೆ ಒತ್ತು ನೀಡಲಾಗುವುದು. ಕೋಳಿ, ಕುರಿ, ಮೇಕೆ ಇತ್ಯಾದಿ ಪ್ರದರ್ಶಿಸಲಾಗುವುದು. ಕಳೆದ ವರ್ಷ ಸುಮಾರು 17 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿದ್ದರು. ಈ ಬಾರಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ. ರಾಜ್ಯದ ನಾನಾ ಭಾಗಗಳಿಂದ ಮೇಳಕ್ಕೆ ರೈತರನ್ನು ಕರೆತರಲು ಹಲವು ಕೃಷಿ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗಿದೆ ಎಂದರು.

ಕುಲಸಚಿವ ಡಾ. ಕೆ.ಸಿ. ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ಡಾ. ಮಧುಪ್ರಸಾದ್, ಸಂಶೋಧನಾ ನಿರ್ದೇಶಕ ಡಾ. ಶಿವರಾಮು ಇತರರಿದ್ದರು.

SundayExpress Pg.02

# UAS to host annual Krishi Mela from Nov 14

**EXPRESS NEWS SERVICE**
@Bengaluru

TO spotlight cutting-edge practices in sustainable farming, the University of Agricultural Sciences (UAS) is set to host its annual Krishi Mela from November 14 to 17, at Gandhi Krishi Vigyan Kendra (GKVK).

This year's event, organised jointly with key Karnataka government departments, will be hosted under the theme 'Climate Smart Digital Agriculture' and will showcase four newly developed crop varieties, demonstrations, and expert insights to support climate-resilient agriculture.

Vice Chancellor of UAS Suresh SV, highlighted that the university will unveil high-yield maize hybrid MAH-15-84, a single hybrid with a 14.2% higher yield than its predecessor, the disease resistant alasande variety KBC-12, the sunflower crossbreed KBSH-90, with a 26% higher oil yield, and the Bajra Napier hybrid PBN-342, which offers enhanced green fodder yield and quality. Each variety is specifically designed for cultivation across zones 5 and 6 in Karnataka. The agriculture fair will feature 700 stalls, showcasing organic farming, soilless agriculture, advanced irrigation, and integrated pest management. Special exhibitions on horticulture, precision agriculture, medicinal plants, and watershed management will provide farmers with hands-on insights into sustainable practices.

The four-day long event will also recognise farmers across different categories. It will honour top-performing farmers, and 146 farmers at district and taluk levels, including young farmers under 35.

**Agri programme for specially challenged**

As the annual Krishi Mela draws massive crowds each year, it is challenging for differently abled individuals to be part of the event. Therefore, a separate programme has been arranged by the UAS to ensure inclusivity. The event 'A day with special minds in an agricultural environment' will be held today (Sunday) from 9 am. The event will be inaugurated by the Agriculture Minister N Chaluvarayaswamy, at the University's campus and will feature guided tours, cultural programmes, and quizzes around agriculture.

# ಈ ಬಾರಿ 'ಹವಾಮಾನ ಚತುರ ಡಿಜಿಟಲ್ ಕೃಷಿ' ಘೋಷದಡಿ ಮೇಳ

## ಜಿಕೆವಿಕೆಯಲ್ಲಿ ನ. 14ರಿಂದ 4 ದಿನ ಮೇಳ | 1 ಎಕರೆಯಲ್ಲಿ ಡಿಜಿಟಲ್ ಕೃಷಿ ಅನಾವರಣ

## ಹವಾಮಾನ, ಭೂಮಿ ಆಧರಿತ ಬೆಳೆ ಬೆಳೆಯುವ ಬಗ್ಗೆ ಮಾಹಿತಿ: ಕುಲಪತಿ ಡಾ.ಸುರೇಶ್

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನ.14ರಿಂದ 17ರ ವರೆಗೆ 'ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷ ವಾಕ್ಯದೊಂದಿಗೆ ಕೃಷಿ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಕೆವಿಕೆ ಕುಲಪತಿ ಡಾ. ಎಸ್.ವಿ. ಸುರೇಶ್ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆನ್ಸರ್ ಆಧಾರಿತ ಡ್ರೋನ್, ವಿವಿಧ ಬೆಳೆಗಳಿಗೆ ಟ್ರ್ಯಾಕ್ಟರ್‌ನಲ್ಲಿ ಔಷಧ ಸಿಂಪಡಿಸುವ ಸೆನ್ಸರ್ ಆಧಾರಿತ ಯಂತ್ರ ಹೀಗೆ ಹೊಸ ಹೊಸ ತಂತ್ರಜ್ಞಾನಗಳು ಈ ಬಾರಿ ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯಲಿವೆ. ಸುಮಾರು 1 ಎಕರೆ ಜಾಗದಲ್ಲಿ ಈ ಬಾರಿ ಡಿಜಿಟಲ್ ಕೃಷಿ ಅನಾವರಣಗೊಳ್ಳಲಿದೆ. ಈ ಬಾರಿ ರೈತರೇ ಕೃಷಿ ಮೇಳದ ರಾಯಭಾರಿಗಳಾಗಿರುವರು. ಭೌತಿಕವಾಗಿ ಮೇಳಕ್ಕೆ ಬರಲಾಗದವರು ಆನ್‌ಲೈನ್ ಮೂಲಕವೂ ವೀಕ್ಷಿಸಬಹುದು. ಜತೆಗೆ ರೈತರು ತಮ್ಮ ಸಮಸ್ಯೆಗಳನ್ನು ಕೇಳಬಹುದು ಎಂದು ಹೇಳಿದರು.

ಕೃಷಿ ಮೇಳದಲ್ಲಿ ಸಾವಯವ ಕೃಷಿ ಸಂಬಂಧಿಸಿದಂತೆ ಸ್ಥಳೀಯ ಜಾನುವಾರುಗಳ ಪ್ರದರ್ಶನಕ್ಕೆ ಒತ್ತು ನೀಡಲಾಗುವುದು. ಕೋಳಿ, ಕುರಿ, ಮೇಕೆ ಇತ್ಯಾದಿಗಳನ್ನು ಪ್ರದರ್ಶಿಸಲಾಗುವುದು. ಕಳೆದ ವರ್ಷದ ಪ್ರದರ್ಶನಕ್ಕೆ ಸುಮಾರು 17 ಲಕ್ಷ ಮಂದಿ ಭೇಟಿ ನೀಡಿದ್ದರು. ರಾಜ್ಯಾದ್ಯಂತ ಉತ್ತಮ ಮಳೆಯಾಗಿದ್ದು ಈ ಬಾರಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ. ರಾಜ್ಯದ ಹಲವು ಭಾಗಗಳಿಂದ ಮೇಳಕ್ಕೆ ರೈತರನ್ನು ಕರೆತರಲು ಹಲವು ಕೃಷಿ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಲಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಮಳೆ ಅಗತ್ಯವಿದ್ದಾಗ ಬರುವುದಿಲ್ಲ, ಬೇಡದಿದ್ದರೂ ಕೆಲವೊಮ್ಮೆ ಅತಿಯಾಗಿ ಮಳೆ ಬೀಳುತ್ತದೆ. ಇನ್ನು ಕೆಲವೊಮ್ಮೆ ಅತಿಯಾದ ಬಿಸಿಲು. ಹೀಗಾಗಿ ಯಾವ ವಾತಾವರಣದಲ್ಲಿ ಯಾವ ಭೂಮಿಯಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬುದರ ಬಗ್ಗೆ ರೈತರಿಗೆ ಅಗತ್ಯ ಮಾಹಿತಿ ನೀಡುವ ತಂತ್ರಜ್ಞಾನವೂ ಬರಲಿದೆ. ಕೃಷಿಯಲ್ಲೂ ಡಿಜಿಟಲ್ ಸೂತ್ರವನ್ನು ಅಳವಡಿಸುವ ಮೂಲಕ ಕೃಷಿಕರನ್ನು ಬಾಧಿಸುತ್ತಿರುವ ಕೂಲಿ ಕಾರ್ಮಿಕರ ಕೊರತೆ ನೀಗಿಸುವುದು, ಖರ್ಚು ಕಡಿಮೆ ಮಾಡುವುದು ಇತ್ಯಾದಿ ಡಿಜಿಟಲ್ ಕೃಷಿ ಪೂರಕವಾಗಲಿದೆ ಎಂದರು.

**1 ಎಕರೆಯಲ್ಲಿ ಯಂತ್ರಗಳ ಪ್ರದರ್ಶನ:** ಕೃಷಿ ಬಾಟ್ ಸುಧಾರಿತ ಬಿತ್ತನೆ ತಂತ್ರಜ್ಞಾನವನ್ನು ಹೊಂದಿದ್ದು ಪ್ರತಿ ಬೀಜವನ್ನು ಗರಿಷ್ಠ ಆಳದಲ್ಲಿ ಮತ್ತು ಗರಿಷ್ಠ ಇಳುವರಿಗಾಗಿ ಸಮಾನಾಂತರದಲ್ಲಿ ನೆಡಲಾಗುತ್ತದೆ. ಇದು ಸಮಯವನ್ನು ಉಳಿಸುವುದಲ್ಲದೇ, ಬೀಜ ವ್ಯರ್ಥವನ್ನು ಕಡಿಮೆ ಮಾಡುತ್ತದೆ ಮತ್ತು ಕ್ಷೇತ್ರದಾದ್ಯಂತ ಏಕರೂಪದ ಬೆಳವಣಿಗೆಯನ್ನು ಖಾತ್ರಿಗೊಳಿಸುತ್ತದೆ. ಕೃಷಿ ಬಾಟ್ ಕೇವಲ ಬೀಜಗಳನ್ನು ನೆಡುವುದಲ್ಲದೇ ಗೊಬ್ಬರವನ್ನು ಪರಿಣಾಮಕಾರಿಯಾಗಿ ಸಿಂಪಡಿಸಲು ಸಹಕಾರಿಯಾಗಿರುತ್ತದೆ. ಮಣ್ಣಿನ ಆರೋಗ್ಯವನ್ನು ಸುಧಾರಿಸುತ್ತದೆ ಮತ್ತು ಬೆಳೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಕೃಷಿಬಾಟ್ ಅನ್ನು ಸಂಪೂರ್ಣವಾಗಿ ಸರಳ ರಿಮೋಟ್ ಸಿಸ್ಟಂ ಮೂಲಕ ನಿಯಂತ್ರಿಸಲಾಗುತ್ತದೆ. ಗೊಬ್ಬರವನ್ನು ಸಿಂಪಡಿಸುವುದು ಮತ್ತು ಕೃಷಿಯ ಸಂಪೂರ್ಣ ಪ್ರಕ್ರಿಯೆಯನ್ನು ದೂರದಿಂದಲೇ ಸುಲಭವಾಗಿ ನಿರ್ವಹಿಸಬಹುದು. ಸುಧಾರಿತ ಯಂತ್ರಗಳ ಪ್ರದರ್ಶನಕ್ಕಾಗಿ ಒಂದು ಎಕರೆ ಭೂಮಿಯಲ್ಲಿ ಪ್ರತ್ಯೇಕ ಪೆವಿಲಿಯನ್ ವ್ಯವಸ್ಥೆಯಿರುತ್ತದೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ಕೃಷಿ ವಿವಿ ಕುಲಸಚಿವ ಡಾ. ಕೆ.ಸಿ. ನಾರಾಯಣಸ್ವಾಮಿ, ಸಂಶೋಧನಾ ನಿರ್ದೇಶಕ ಡಾ. ಎಚ್. ಎಸ್. ಶಿವರಾಮು, ವಿಸ್ತರಣಾ ನಿರ್ದೇಶಕ ಡಾ. ವಿ.ಎಲ್. ಮಧುಪ್ರಸಾದ್, ಡೀನ್ (ವಿದ್ಯಾರ್ಥಿ ಕಲ್ಯಾಣ) ಡಾ. ಮೋಹನ್ ಈಶ್ವರ್ ನಾಯ್ಕ, ತರಬೇತಿ ಸಂಯೋಜಕ ಡಾ.ಕೆ.ಶಿವರಾಮು ಮತ್ತಿತರರು ಉಪಸ್ಥಿತರಿದ್ದರು.




ಕೃಷಿ ಮೇಳದ ಬಗ್ಗೆ ಕುಲಪತಿ ಡಾ. ಎಸ್.ವಿ. ಸುರೇಶ್ ಮಾಹಿತಿ ನೀಡಿದರು. ಡಾ. ನಾರಾಯಣಸ್ವಾಮಿ, ಡಾ. ಶಿವರಾಮು, ಮಧುಪ್ರಸಾದ್ ಇತರರಿದ್ದರು.

### 700 ಮಳಿಗೆ ಸ್ಥಾಪನೆ

ಕೃಷಿ ಮೇಳದಲ್ಲಿ 700 ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಅಲಂಕಾರಿಕ ಮೀನುಗಳು ವಿಶೇಷವಾಗಿರಲಿವೆ. ಸಿರಿಧಾನ್ಯ ಪೂರಕ ಆಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಮಳಿಗೆ ತೆರೆಯಲಾಗುತ್ತದೆ.

### ಅಧಿಕ ಇಳುವರಿಯ ಹೊಸ ತಳಿಗಳ ಬಿಡುಗಡೆ

ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ಕೊಡುವ ಮುಸುಕಿನ ಜೋಳ ಸಂಕರಣ ತಳಿ, ಅಲಸಂದೆ ತಳಿ, ಸೂರ್ಯಕಾಂತಿ ಸಂಕರಣ ತಳಿ, ಬಾಜ್ರ ನೇಪಿಯರ್ ಸಂಕರಣ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೃಷಿ ಮೇಳದಲ್ಲಿ ಇವುಗಳನ್ನು ಪರಿಚಯಿಸಲಾಗುತ್ತದೆ.

### ಕೃಷಿ ಮೇಳಕ್ಕೆ ಬರುವವರಿಗೆ ಉಚಿತ ಪ್ರವೇಶ, ಪಾರ್ಕಿಂಗ್ ವ್ಯವಸ್ಥೆ

ಮೇಳಕ್ಕೆ ಬರುವವರಿಗೆ ಪ್ರವೇಶ ಉಚಿತವಾಗಿರುತ್ತದೆ. ರಾಜ್ಯದ ನಾನಾ ಭಾಗಗಳಿಂದ ಬಸ್‌ನಲ್ಲಿ ಬರುವವರಿಗೆ ಜಿಕೆವಿಕೆ ಗೇಟ್‌ನಿಂದ ಒಳಗಡೆ ಕರೆದೊಯ್ಯಲು ಸಂಸ್ಥೆಯ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾರು, ಬೈಕ್ ಹಾಗೂ ಇತರೆ ವಾಹನಗಳಲ್ಲಿ ಬರುವವರಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು.

### 146 ರೈತರಿಗೆ ಸನ್ಮಾನ

ಕೃಷಿಯಲ್ಲಿ ಸಾಧನೆ ಮಾಡಿದ ರೈತರನ್ನು ಇದೇ ವೇಳೆ ಗೌರವಿಸಲಾಗುವುದು. ಇದಕ್ಕಾಗಿ ರಾಜ್ಯಮಟ್ಟದಲ್ಲಿ 6 ಮಂದಿ, ಜಿಲ್ಲಾ ಮಟ್ಟದಲ್ಲಿ 20 ಹಾಗೂ ತಾಲೂಕು ಮಟ್ಟದಲ್ಲಿ 120 ಮಂದಿ ರೈತರಿಗೆ ಪ್ರಶಸ್ತಿಗಳನ್ನು

### ರಿಯಾಯಿತಿಯಲ್ಲಿ ಮುದ್ದೆ ಊಟ

ಅಂದ ಹಾಗೆ ಮೇಳಕ್ಕೆ ಬರುವ ರೈತರು ಹಾಗೂ ರೈತೇತರರಿಗೆ ಮೇಳದಲ್ಲಿ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಮಾಡಲಾಗುವುದು. ನಾಲ್ಕೂ ದಿನವೂ ಇರುತ್ತದೆ. ಇದಲ್ಲದೆ ಇತರೆ ತಿಂಡಿ ಮಾರಾಟ ಮಳಿಗೆಗಳಿರುತ್ತವೆ.

---

■ **ಬೆಂಗಳೂರು ಕೃಷಿ ವಿಶ್ವವಿದ್ಯಾಲಯ:** ಕೃಷಿ ಪರಿಸರದಲ್ಲಿ ವಿಶೇಷ ಚೇತನರೊಂದಿಗೆ ಒಂದು ದಿನ. ಮುಖ್ಯ ಅತಿಥಿಗಳು: ಕೃಷಿ ಸಚಿವ ಚಲುವರಾಯಸ್ವಾಮಿ, ಜಿಕೆವಿಕೆ ಕುಲಪತಿ ಡಾ. ಎಸ್. ವಿ. ಸುರೇಶ್. ಸ್ಥಳ: ಜಿಕೆವಿಕೆ ಆವರಣ. ಬೆಳಗ್ಗೆ 9ಕ್ಕೆ.

Udayavani
Pg.04,05

## ನಾಲ್ಕು ಹೊಸ ತಳಿಗಳ ಬಿಡುಗಡೆ, ತಂತ್ರಜ್ಞಾನಗಳ ಅನಾವರಣ

# ನ.14ರಿಂದ 4 ದಿನ ಕೃಷಿ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 14ರಿಂದ 17ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷವಾಕ್ಯದಡಿ ಕೃಷಿ ಮೇಳ ಆಯೋಜಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಶನಿವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿಯ ಮೇಳದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, ನಾಲ್ಕು ಹೊಸ ತಳಿಗಳಾದ ಮುಸುಕಿನಜೋಳ ಸಂಕರಣ (ಎಂಎಎಚ್ 15-85), ಅಲಸಂದೆ (ಕೆಬಿಸಿ-12), ಸೂರ್ಯಕಾಂತಿ ಸಂಕರಣ (ಕೆಬಿಎಸ್‌ಎಚ್-90), ಬಾಜ್ರ ನೇಪಿಯರ್ ಸಂಕರಣ (ಪಿಬಿಎನ್-342) ಎಂಬ ತಳಿಗಳು ಬಿಡುಗಡೆಯಾಗಲಿವೆ' ಎಂದು ಮಾಹಿತಿ ನೀಡಿದರು.

'ಸೆನ್ಸಾರ್ ಆಧಾರಿತ ಡ್ರೋನ್, ಬೆಳೆಗಳಿಗೆ ಟ್ರ್ಯಾಕ್ಟರ್ ಮೂಲಕ ಔಷಧಿ ಸಿಂಪಡಿಸುವ ಸೆನ್ಸಾರ್ ಆಧಾರಿತ



ಯಂತ್ರಗಳು ಹಾಗೂ ನೂತನ ತಂತ್ರಜ್ಞಾನಗಳು ಕೃಷಿ ಮೇಳದಲ್ಲಿ ರೈತರ ಗಮನ ಸೆಳೆಯಲಿವೆ. ಒಂದು ಎಕರೆ ಪ್ರದೇಶದಲ್ಲಿ ಡಿಜಿಟಲ್ ಕೃಷಿಗೆ ಸಂಬಂಧಿಸಿದ ಯಂತ್ರಗಳು ಅನಾವರಣಗೊಳ್ಳಲಿವೆ' ಎಂದರು.

ಕೃಷಿ ಮೇಳದಲ್ಲಿ 700ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ. ಸಿರಿಧಾನ್ಯ ಪೂರಕ ಆಹಾರಕ್ಕೆ ಸಂಬಂಧಿಸಿದಂತೆ ವಿಶೇಷ ಮಳಿಗೆಗಳು ಇರಲಿವೆ. ಮೇಳಕ್ಕೆ ಆಗಮಿಸುವ ರೈತರಿಗೆ ಹಾಗೂ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಮಾಡಲಾಗುವುದು. ಇದರ ಜೊತೆಗೆ ತಿಂಡಿ ಮಾರಾಟದ ಮಳಿಗೆಗಳು ಇರಲಿವೆ ಎಂದು ಹೇಳಿದರು.

'ಮೇಳಕ್ಕೆ ಬರುವವರಿಗೆ ಪ್ರವೇಶ ಉಚಿತವಿದೆ. ಜಿಕೆವಿಕೆ ಗೇಟ್‌ನಿಂದ ಒಳಗಡೆ ಕರೆದೊಯ್ಯಲು ಸಂಸ್ಥೆಯ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾರು, ಬೈಕ್ ಹಾಗೂ ಇತರೆ ವಾಹನಗಳಲ್ಲಿ ಬರುವವರಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು' ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಸಚಿವ ಕೆ.ಸಿ. ನಾರಾಯಣಸ್ವಾಮಿ, ತರಬೇತಿ ಸಂಯೋಜಕ ಕೆ. ಶಿವರಾಮು ಸುದ್ದಿಗೋಷ್ಠಿಯಲ್ಲಿದ್ದರು.

### ಆರು ರೈತರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿ

ಉತ್ತಮ ಸಾಧನೆ ಮಾಡಿದ ಆರು ಜನ ರೈತರಿಗೆ ರಾಜ್ಯಮಟ್ಟದ 'ಕೃಷಿ ಪ್ರಶಸ್ತಿ'ಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪ್ರಕಟಿಸಿದೆ.

'ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕುರಟಹಳ್ಳಿಯ ಸಿ.ಆರ್. ರಾಧಾಕೃಷ್ಣ, 'ಎಂ.ಎಚ್.ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ'ಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಹಾಡೋನಹಳ್ಳಿಯ ರೂಪಾ ಎಚ್.ಪಿ. ಆಯ್ಕೆಯಾಗಿದ್ದಾರೆ' ಎಂದು ಎಸ್.ವಿ. ಸುರೇಶ ತಿಳಿಸಿದರು.

'ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ವಗರಹಳ್ಳಿಯ ಪ್ರವೀಣ್ ವಿ.ಎಸ್., 'ಕ್ಯಾನ್ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ'ಗೆ ರಾಮನಗರ ಜಿಲ್ಲೆಯ ಕಗ್ಗಲಹಳ್ಳಿಯ ಶಾಂತಮ್ಮ ವೈ.ಸಿ., 'ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಉಣ್ಣೇನಹಳ್ಳಿಯ ನಾಗವರ್ಮ ಯು.ಎಂ., ಹಾಗೂ 'ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತೆ ಪ್ರಶಸ್ತಿ'ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಎಂ. ಶಾಲಿನಿ ಆಯ್ಕೆಯಾಗಿದ್ದಾರೆ' ಎಂದರು.

Prajavani Pg.04

---

ಜನದನಿಯ ಸಾರಥಿ
ವಾರ್ತಾ ಭಾರತಿ
Oct 27, 2024

# ನ.14ರಿಂದ ಜಿಕೆವಿಕೆ 'ಕೃಷಿ ಮೇಳ-2024'

ಬೆಂಗಳೂರು, ಅ.26: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನ.14ರಿಂದ 17ರವರೆಗೆ 'ಹವಾಮಾನ ಚತುರ ಡಿಜಿಟಲ್ ಕೃಷಿ'ಎಂಬ ಘೋಷ ವಾಕ್ಯದೊಂದಿಗೆ 'ಕೃಷಿ ಮೇಳ-2024' ಅನ್ನು ಜಿಕೆವಿಕೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶನಿವಾರ ನಗರದ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಎಸ್.ವಿ.ಸುದೇಶ್, ಈ ಬಾರಿ ನಡೆಯಲಿರುವ ಕೃಷಿ ಮೇಳದಲ್ಲಿ ಮುಸುಕಿನಜೋಳ ಸಂಕರಣ ತಳಿ: ಎಂಎಎಚ್15-18, ಅಲಸಂದೆ ತಳಿ: ಕೆಬಿಸಿ-12, ಸೂರ್ಯಕಾಂತಿ ಸಂಕರಣ ತಳಿ: ಕೆಬಿಎಸ್‌ಎಚ್-90, ಬಾಜ್ರ ನೇಪಿಯರ್ ಸಂಕರಣ ತಳಿ: ಪಿಬಿಎನ್-342 ನೂತನ ತಳಿಗಳನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಕೃಷಿ ಮೇಳದಲ್ಲಿ ವಿಶೇಷ ಆಕರ್ಷಣೆಗಳಾಗಿ ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ, ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು, ನೂತನವಾಗಿ ಬಿಡುಗಡೆಯಾದ ವಿವಿಧ ಬೆಳೆ ತಳಿಗಳ ಪ್ರಾತ್ಯಕ್ಷಿಕೆ, ರೇಷ್ಮೆಕೃಷಿ, ತೋಟಗಾರಿಕೆ ಬೆಳೆಗಳು, ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯಗಳು, ಸಿರಿ ಧಾನ್ಯಗಳು ಮತ್ತು ಅವುಗಳ ಮಹತ್ವ, ಜಲಾಯನ ನಿರ್ವಹಣೆ, ಸಾವಯುವ ಕೃಷಿ ಪದ್ಧತಿಗಳು, ಸಮಗ್ರ ಕೀಟ, ರೋಗ ಹಾಗೂ ಪೋಷಕಾಂಶಗಳ ನಿರ್ವಹಣೆ, ಮಣ್ಣು ರಹಿತ ಕೃಷಿ, ಮಾರುಕಟ್ಟೆ ನೈಪುಣ್ಯತೆ ಮಾಹಿತಿ, ಮಣ್ಣು ಪರೀಕ್ಷೆಗನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ, ಮಳೆ ಹಾಗೂ ಮೇಲ್ಬಾವಣಿ ನೀರಿನ ಕೊಯ್ಲು, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಸೇರಿದಂತೆ ರೈತರ ಕೃಷಿ ತಾಂತ್ರಿಕ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ ನೀಡಲಾಗುವುದು ಎಂದು ತಿಳಿಸಿದರು.

ಮೇಳದಲ್ಲಿ ಕೃಷಿ ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿಗಳು, ಜಿಲ್ಲಾ ಮಟ್ಟದ ರೈತ ಪ್ರಶಸ್ತಿ ಮತ್ತು ರೈತ ಮಹಿಳಾ ಪ್ರಶಸ್ತಿಗಳು, ತಾಲೂಕು ಮಟ್ಟದ ರೈತ ಪ್ರಶಸ್ತಿ ಮತ್ತು ರೈತ ಮಹಿಳಾ ಪ್ರಶಸ್ತಿಗಳನ್ನು ನೀಡಲಾಗುವುದು. 700 ಮಳಿಗೆಗಳಲ್ಲಿ ಕೃಷಿ ಸಂಬಂಧಿ ವಿವಿಗಳು, ಅಭಿವೃದ್ಧಿ ಇಲಾಖೆಗಳ ಮಳಿಗೆಗಳು, ಕೃಷಿ ಪರಿಕರಗಳ ಮಳಿಗೆಗಳು, ಕೃಷಿ ಇಂಜಿನಿಯರಿಂಗ್ ಮತ್ತು ಪಶುಸಂಗೋಪನೆ ಮಳಿಗೆಗಳಲ್ಲಿ ನೂತನ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಗುವುದು ಎಂದು ಹೇಳಿದರು.

ಜಿಕೆವಿಕೆಯ ಮಹಾದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಉಚಿತ ಸಾರಿಗೆ ವ್ಯವಸ್ಥೆ, ಪ್ರತ್ಯೇಕ ವಾಹನ ನಿಲುಗಡೆ ವ್ಯವಸ್ಥೆ, ಉಚಿತ ಪ್ರವೇಶ, ರಿಯಾಯತಿ ದರದಲ್ಲಿ ಊಟದ ವ್ಯವಸ್ಥೆ ಸವಲತ್ತುಗಳನ್ನು ಮಾಡಲಾಗಿದೆ ಎಂದು ಸುದೇಶ್ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಜಿಕೆವಿಕೆ ಕುಲಸಚಿವ ಡಾ.ಕೆ.ಸಿ. ನಾರಾಯಣಸ್ವಾಮಿ, ಸ್ನಾತಕೋತ್ತರ ಡೀನ್ ಡಾ.ಎಚ್.ಎಸ್.ಶಿವರಾಮು, ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್. ಮಧುಪ್ರಸಾದ್ ಹಾಗೂ ತರಬೇತಿ ಸಂಯೋಜಕ ಡಾ.ಕೆ.ಶಿವರಾಮು ಉಪಸ್ಥಿತರಿದ್ದರು.

ಪ್ರಜಾ ಪ್ರಗತಿ

Oct 28, 2024

# ಕೃಷಿ ಕಾರ್ಯಕ್ರಮಕ್ಕೆ ಮಕ್ಕಳ ಚಾಲನೆ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯದಿಂದ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ ಕೃಷಿ ಪರಿಸರದಲ್ಲಿ ವಿಶೇಷ ಚೇತನ ಮಕ್ಕಳೊಂದಿಗೆ ಒಂದು ದಿನ ಕಾರ್ಯಕ್ರಮಕ್ಕೆ ವಿಶೇಷ ಚೇತನ ಮಕ್ಕಳು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ. ಸುರೇಶ್, ಡೀನ್ ಡಾ.ಮೋಹನ್ ನಾಯ್ಕ, ಪ್ರಾಧ್ಯಾಪಕರಾದ ಡಾ ಕೆ.ಪಿ.ರಘುಪ್ರಸಾದ್, ಡಾ.ಸಿದ್ದಯ್ಯ, ಡಾ.ಮಹದೇವ ಮೂರ್ತಿ, ಮತ್ತಿತರರು ಉಪಸ್ಥಿತರಿದ್ದರು.

ಈ ವೇಳೆ ಮಕ್ಕಳು ಸಂಗೀತ, ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ತಮ್ಮ ಕೌಶಲ್ಯ ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿನ ನೂರಕ್ಕೂ ಹೆಚ್ಚು ವಿಶೇಷ ಔಷಧೀಯ ಗುಣಗಳುಳ್ಳ ಸಸಿಗಳ ಬಗ್ಗೆ ಮಾಹಿತಿ ನೀಡಿದ ಸಿಬ್ಬಂದಿ, ಅವುಗಳ ಸದುಪಯೋಗದ ಕುರಿತು ಪೋಷಕರಿಗೆ ಮಾಹಿತಿ ನೀಡಿದರು.

ಡಾ.ಎಸ್.ವಿ. ಸುರೇಶ್ ಮಾತನಾಡಿ, ವಿಶೇಷ ಚೇತನರು ಸಾಮಾನ್ಯರಂತಿರಬೇಕು ಎನ್ನುವ ಆಶಯದೊಂದಿಗೆ ಕಾರ್ಯಕ್ರಮ ರೂಪಿಸಲಾಗಿದೆ. ವಿಶೇಷ ಮನಸ್ಸುಗಳಿಗೆ ಪ್ರತಿಯೊಬ್ಬರೂ ಸ್ಪಂಧಿಸುವ ಮನೋಭಾವ ಬೆಳೆಸಿಕೊಳ್ಳಬೇಕಿದೆ ಎಂದರು. ದೂರದರ್ಶನದೊಂದಿಗೆ ವಿಶೇಷಚೇತನ ಮಕ್ಕಳ ಶಾಲಾ ಪ್ರಾಂಶುಪಾಲರಾದ ಪನ್ನಗ ಬಾಬು, ಕೃಷಿ ವಿಶ್ವವಿದ್ಯಾಲಯದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮ ಶ್ಲಾಘನೀಯವಾದದ್ದು ಎಂದರು.